154 ಡೆಪ ನಿ:330 - (91)

<u>ನಿಯಮ **330 ರಡಿ** ವಿಧಾನ ಪರಿಷತ್ತಿನ **ಮಾನ್ಯ** ಸದಸ್ಯರಾದ</u>
<u>ಶ್ರೀ. **ಎಸ್. ಎಲ್. ಭೋಜೇಗೌಡ** ರವರು **ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**</u>

**<u>ಪ್ರಶ್ನೆ:</u>** ರಾಜ್ಯದಲ್ಲಿ ಕೋವಿಡ್-19 ಪರಿಸ್ಥಿತಿಯಿಂದಾಗಿ ಮದುವೆ, ಪೂಜಾ ಕಾರ್ಯಕ್ರಮ, ಉತ್ಸವಗಳು ಸೇರಿದಂತೆ ಶುಭ ಸಮಾರಂಭಗಳು ನಡೆಯದಿರುವ ಪರಿಣಾಮವಾಗಿ ಅಲಂಕಾರಿಕ ಎಲೆ ಮತ್ತು ಪುಷ್ಪಗಳನ್ನು ಬೆಳೆಯುತ್ತಿರುವ ರೈತರು ಸಂಕಷ್ಟಕ್ಕೆ ಸಿಲುಕಿರುವ ಪ್ರಯುಕ್ತ ಸರ್ಕಾರವು ಹೆಚ್ಚಿನ ಹೂ-ಬೆಳೆದಿರುವ ರೈತರಿಗೆ ಗರಿಷ್ಟ 2,25,000/- ಗಳ ಬೆಂಬಲ ಬೆಲೆಯನ್ನು ಘೋಷಿಸಿರುವುದು ಸರಿಯಷ್ಟೆ. ಬೆಂಬಲ ಬೆಲೆಯನ್ನು ಘೋಷಿಸಲಾದಾಗ್ಯೂ ಸಹ ಅಲಂಕಾರಿಕ ಎಲೆ ಮತ್ತು ಪುಷ್ಪಗಳನ್ನು ಬೆಳೆಯುತ್ತಿರುವ ರೈತರು ತಮ್ಮ ಜೀವನ ನಿರ್ವಹಣೆ ಆಧಾರಿತ ಯೋಜನೆಗೆ ಲಾಕ್‌ಡೌನ್ ನಿಯಮಗಳಿಂದ ತೊಂದರೆಯಾಗಿರುತ್ತದೆ. ಈ ಸಂಬಂಧ ಸಂಕಷ್ಟಕ್ಕೆ ಸಿಲುಕಿರುವ ಅಲಂಕಾರಿಕ ಎಲೆ ಮತ್ತು ಪುಷ್ಪಗಳನ್ನು ಬೆಳೆಯುತ್ತಿರುವ ರೈತರ ಹಿತದೃಷ್ಟಿಯಿಂದ ಹಾಗೂ ದೀರ್ಘಾವಧಿಯಲ್ಲಿ ಪರಿಸರಕ್ಕೆ ಹಾನಿಯನ್ನು ಮತ್ತು ಆರೋಗ್ಯಕ್ಕೆ ಅಪಾಯವನ್ನು ಉಂಟುಮಾಡಲು ಕಾರಣವಾಗುವ ಕೃತಕ/ಪ್ಲಾಸ್ಟಿಕ್ ಅಲಂಕಾರಿಕ ಎಲೆ ಮತ್ತು ಪುಷ್ಪಗಳನ್ನು ತಡೆಗಟ್ಟುವ ಸಂಬಂಧ ಮಾನ್ಯ ತೋಟಗಾರಿಕಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**<u>ಉತ್ತರ:</u>** ಕರ್ನಾಟಕ ರಾಜ್ಯದಲ್ಲಿ ಪುಷ್ಪ ಬೆಳೆಗಳನ್ನು ಸುಮಾರು 38,000 ಹೆಕ್ಟೇರ್ ಹಾಗೂ ವಾಣಿಜ್ಯ ಪುಷ್ಪ ಬೆಳೆಗಳನ್ನು ಸುಮಾರು 1,500 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಗುಲಾಬಿ, ಸೇವಂತಿಗೆ, ಚೆಂಡು ಹೂ, ಸುಗಂಧರಾಜ, ಕನಕಾಂಬರ ಇತ್ಯಾದಿ ಬಿಡಿ ಹೂಗಳನ್ನು ಹಾಗೂ ಕಟ್ ಗುಲಾಬಿ, ಕಟ್ ಸೇವಂತಿಗೆ, ಜರ್ಬೆರ, ಆಂಥೂರಿಯಮ್ಸ್, ಆರ್ಕಿಡ್ಸ್ ಇತ್ಯಾದಿ ವಾಣಿಜ್ಯ ಪುಷ್ಪಗಳನ್ನು ಹಸಿರು ಮನೆ/ ನೆರಳು ಪರದೆಗಳಲ್ಲಿ ಬೆಳೆಯಲಾಗುತ್ತಿದೆ. ರೈತರಿಗೆ ಇಲಾಖೆಯ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಹಾಗೂ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಗಳಡಿ ಬೆಳೆ ಅಭಿವೃದ್ಧಿ ಹಾಗೂ ಮಾರುಕಟ್ಟೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಸಹಾಯಧನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಕೋವಿಡ್-19 ರ ಕಾರಣದಿಂದ ರಾಜ್ಯದಲ್ಲಿ ಲಾಕ್ ಡೌನ್ ವಿಧಿಸಿದ ಹಿನ್ನಲೆಯಲ್ಲಿ ರಾಜ್ಯದ ಹೂವು ಬೆಳೆದ ರೈತರಿಗೆ ಆಗಿರುವ ನಷ್ಟಕ್ಕೆ ಪರಿಹಾರವಾಗಿ ಪ್ರತಿ ಹೆಕ್ಟೇರ್ ಹೂವಿನ ಹಾನಿಗೆ ಗರಿಷ್ಠ ಮೊತ್ತ ರೂ.10,000/-ಗಳು ಹಾಗೂ ಕನಿಷ್ಠ ಮೊತ್ತ ರೂ.2,000/-ಗಳಂತೆ ಪರಿಹಾರ ಮೊತ್ತವನ್ನು ನೀಡಲಾಗಿರುತ್ತದೆ.

ಸರ್ಕಾರದ ವತಿಯಿಂದ ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು (IFAB) ನಿಯಮಿತ ಸಂಸ್ಥೆಯನ್ನು ಸ್ಥಾಪಿಸಿದ್ದು, ವಾಣಿಜ್ಯ ಪುಷ್ಪಗಳ ಮಾರಾಟಕ್ಕೆ ಬೆಂಗಳೂರಿನ ಹೆಬ್ಬಾಳದಲ್ಲಿ ಡಿಜಿಟಲ್ ಹರಾಜು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಸಾರ್ವಜನಿಕ ವಲಯದಲ್ಲಿ ಗ್ರಾಹಕರು ಕೃತಕ ಅಲಂಕಾರಿಕ ಎಲೆ ಮತ್ತು ಪುಷ್ಪಗಳ ಬಳಕೆಯನ್ನು ತಡೆಗಟ್ಟುವ ಸಂಬಂಧ ಇಲಾಖೆಯ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ:-

1. IFAB ಕಂಪನಿಯಲ್ಲಿ ಬೆಳೆಗಾರರಿಗೆ ಹಾಗೂ ಗ್ರಾಹಕರಿಗೆ ಪ್ಲಾಸ್ಟಿಕ್ ಹೂಗಳ ಬಳಕೆ ಮಾಡದಿರುವ ಬಗ್ಗೆ ಹಾಗೂ ನೈಸರ್ಗಿಕ ಹೂಗಳ ಬಳಕೆ ಬಗ್ಗೆ ತರಬೇತಿಗಳಲ್ಲಿ ಮಾಹಿತಿ ನೀಡಲಾಗುತ್ತಿದೆ. ದಿನಾಂಕ: 31-12-2023 ರಂದು ತೋಟಗಾರಿಕೆ ಇಲಾಖೆ, ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿ., ಹೆಬ್ಬಾಳ, ಜಿ.ಎಫ್.ಸಿ.ಐ., ಅಗ್ರಿ ಪ್ಲಾಸ್ಟ್, ರಾಜ್ಯದ ಹೂ ಬೆಳೆಗಾರರು/ ಖರೀದಿದಾರರ ಸಹಯೋಗದಲ್ಲಿ ಲಾಲ್‌ಬಾಗ್‌ನಲ್ಲಿ "ನೈಸರ್ಗಿಕ ಹೂವುಗಳನ್ನು ಉತ್ತೇಜಿಸಿ ರೈತರನ್ನು ಪ್ರೋತ್ಸಾಹಿಸುವ ಸಲುವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಜ್ಯದ ರೈತರು ಬೆಳೆದಿರುವಂತಹ ಸುಮಾರು 25-30 ವಿವಿಧ ತಳಿಯ ಕಟ್ ಗುಲಾಬಿ, ಸುಮಾರು 16 ವಿವಿಧ ತಳಿಯ ಕಟ್ ಸೇವಂತಿಗೆ, ಜರ್ಬೆರ, ಆಂಥೂರಿಯಮ್ಸ್, ಆರ್ಕಿಡ್ಸ್ ಇತ್ಯಾದಿ ವಾಣಿಜ್ಯ ಬೆಳೆಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ಏರ್ಪಡಿಸಲಾಗಿರುತ್ತದೆ. ದಿನಾಂಕ: 31.12.2023 ರಂದು ಬೆಳಗ್ಗೆ ಲಾಲ್‌ಬಾಗ್ ಗೆ ಬರುವ ನಡಿಗೆದಾರರಿಗೆ ಒಂದು ಗುಲಾಬಿ ಹೂವನ್ನು ಉಚಿತವಾಗಿ ನೀಡಿ ತಮ್ಮ ದೈನಂದಿನ ಬದುಕಿನಲ್ಲಿ ಹಾಗೂ ವಿವಿಧ ಕಾರ್ಯಕ್ರಮದಲ್ಲಿ ನೈಸರ್ಗಿಕ ಹೂಗಳನ್ನು ಬಳಸಲು ಹಾಗೂ ಕೃತಕ ಹೂಗಳನ್ನು ಬಳಸದಿರಲು ಮನವರಿಕೆ ಮಾಡಿಕೊಡಲಾಯಿತು.

2. ಲಾಲ್‌ಬಾಗ್‌ನಲ್ಲಿ ವರ್ಷಕ್ಕೆ ಎರಡು ಬಾರಿ ಜರುಗುವ ಪ್ರಸಿದ್ಧವಾದ ಫಲ-ಪುಷ್ಪ ಪ್ರದರ್ಶನಗಳಲ್ಲಿ ಕೃತಕ ಪ್ಲಾಸ್ಟಿಕ್ ಹೂಗಳ ಬಳಕೆಯನ್ನು, ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನವನಗಳಲ್ಲಿ ಜರುಗುವ ಎಲ್ಲಾ ಮೇಳಗಳು ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಮತ್ತು ಲಾಲ್‌ಬಾಗ್ ಸಸ್ಯ ತೋಟ ಹಾಗೂ ನಂದಿ ಗಿರಿಧಾಮಗಳ ಒಳಾಂಗಣದಲ್ಲಿ ಎಲ್ಲಾ ರೀತಿಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಪ್ಲಾಸ್ಟಿಕ್ ಎಲೆ ಹಾಗೂ ಅಲಂಕಾರಿಕ ಪುಷ್ಪಗಳ ಬಳಕೆಯನ್ನು ನಿಷೇದಿಸುವ/ತಡೆಗಟ್ಟುವ ವಿಷಯವು ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಸದರಿ ವಿಷಯದ ಬಗ್ಗೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಡಿ ಬರುವ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪುಷ್ಪ ಬೆಳೆಗಾರರಿಂದ ಮನವಿ ಬಂದಿದ್ದು, ಸದರಿ ಸಂಸ್ಥೆಯ ಪರಿಶೀಲನೆಯಲ್ಲಿದೆ.

HORTI 599 HGM 2024(E)

**(ಎಸ್. ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು